ಕರ್ನಾಟಕ ವಿಧಾನಸಭೆ
ಮಂಗಳವಾರ 6ನೇ ಜೂನ್ 2006 ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.48 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣ) ರವರು ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು.

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ:

ವಿಷಯ : ಡಾ: ರಾಜ್‌ಕುಮಾರ್ ರವರ ನಿಧನದ ನಂತರ ಉಂಟಾದ ಗಲಭೆ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ಮೊದಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು, ಪ್ರಸ್ತಾವ ಮಾಡಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸದನದಲ್ಲಿ ದಿವಂಗತ ಡಾ: ರಾಜ್‌ಕುಮಾರ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸುವ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ನಾನು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬುರವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದೆವು. ನಿನ್ನೆ ಶ್ರದ್ಧಾಂಜಲಿ ಅರ್ಪಣೆ ಮಾಡತಕ್ಕಂಥ ವಿಷಯ ಇದ್ದುದ್ದರಿಂದ ಅವರಿಗೆ ಗೌರವವನ್ನು ಕೊಡಬೇಕೆನ್ನುವ ಉದ್ದೇಶದಿಂದ ನಾವು ಆಗ ಎಲ್ಲಾ ವಿವರಗಳಿಗೆ ಹೋಗಲು ಆಗಲಿಲ್ಲ. ನಿನ್ನೆಯ ದಿವಸ ನಾವು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆವು. ಈ ಘಟನೆಯ ಕಾಲದಲ್ಲಿ ಏನು ದುರ್ಮರಣವಾಗಿದೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕರ ಮನಸ್ಸಿನಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಈ ಒಂದು ಘಟನೆ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಏನು ಇದೆ, ಅದಕ್ಕೆ ಸರ್ಕಾರ ಸ್ಪಷ್ಟವಾದ ಉತ್ತರ ಕೊಡಬೇಕೆಂದು ಹೇಳಿದ್ದಾರೆ. ಅದರಲ್ಲೂ ನಾವು ಮಾತನಾಡತಕ್ಕಂಥ ಕಾಲದಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಹೇಳಿದರು, "ಎಲ್ಲಾ ವಿವರಗಳು ನಮ್ಮಲ್ಲಿ ಇವೆ, ಸರ್ಕಾರ ಇದರ ಬಗ್ಗೆ ತಯಾರಾಗಿದೆ, ಯಾರು ಶಾಮೀಲಾಗಿದ್ದಾರೆ" ಎನ್ನತಕ್ಕಂಥಾದ್ದು ಕೂಡ ಹೇಳುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಅವರು ಸ್ಪಷ್ಟಪಡಿಸಬೇಕು.

ನಲವತ್ತು ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ನಾವು ಕೂಡ ಸಾಕಷ್ಟು ಮೇಧಾವಿಗಳನ್ನು ಕಳೆದುಕೊಂಡಿದ್ದೇವೆ, ಅವರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ್ದೇವೆ, ರಾಷ್ಟ್ರಮಟ್ಟದಲ್ಲಿ ನೆರೆರಾಜ್ಯದಲ್ಲೂ ಕೂಡ, ರಾಷ್ಟ್ರಮಟ್ಟದ ನಾಯಕರನ್ನು ಕಳೆದುಕೊಂಡಂತಹ ಕಾಲದಲ್ಲಿ ಶ್ರೀಮತಿ ಇಂದಿರಾಗಾಂಧೀಯವರನ್ನು ಕಳೆದುಕೊಂಡಂಥ ಕಾಲದಲ್ಲಿ, ಶ್ರೀ ರಾಜೀವ್ ಗಾಂಧೀಯವರನ್ನು ಕಳೆದುಕೊಂಡಂತಹ ಕಾಲದಲ್ಲಿ ಅವರ ಅಂತಿಮ ಯಾತ್ರೆಯ ಸಮಯದಲ್ಲಿ ಆಗಿನ ಸರ್ಕಾರ ಯಾವ ರೀತಿಯ ಕಾನೂನು ಸುವ್ಯವಸ್ಥೆಯನ್ನು ಮಾಡಿದೆ ಎನ್ನುವುದೂ ಕೂಡ ನಮಗೆ ಗೊತ್ತಿದೆ. ನಿನ್ನೆ ನಾನು ಹೇಳಿದ್ದೇನೆ. ಈ ನಮ್ಮ ಕರ್ನಾಟಕದ ಕನ್ನಡ ಜನತೆಯ ಮಹಾನ್ ವ್ಯಕ್ತಿಯಾಗಿ ರಾಜ್‌ಕುಮಾರ್‌ರವರು ಬೆಳೆದಿದ್ದಾರೆ, ಅವರು ತಮ್ಮ ಜೀವನದ ಕಾಲದಲ್ಲಿ, ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಹಾಗೂ ಕನ್ನಡದ ಭಾಷೆಯ ಮೇಲೆ ಪ್ರಹಾರ ಬಂದಾಗ ಅವರು ಸಂಘರ್ಷ ಮಾಡಿದ್ದಾರೆ. ಜನರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸುವಂತಹ ರೀತಿಯಲ್ಲಿ ಅವರು ಕೆಲಸಕಾರ್ಯಗಳನ್ನು ಮಾಡಿದ್ದಾರೆ, ಕೇವಲ ಚಲನಚಿತ್ರರಂಗದಲ್ಲಿ ಮಾತ್ರ ಕೆಲಸ ಮಾಡಿದ್ದಾರೆಂದಲ್ಲ ಅವರಿಗೆ ಕರ್ನಾಟಕ ರಾಜ್ಯದಲ್ಲಿ ವಿಶೇಷವಾದ ಗೌರವ ಇದೆ. " ನಾನು ಕನ್ನಡದ ಬೆಳವಣಿಗೆಗೆ, ನೆಲಜಲ ಏನಿದೆ, ಅದಕ್ಕೆ ನನ್ನ ಜೀವನವನ್ನೇ ಸಮರ್ಪಣೆ ಮಾಡತ್ತೆನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅವರು ಚಿತ್ರಜಗತ್ತಿನಲ್ಲಿ 50 ವರ್ಷಗಳ ಕಾಲ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಆಗ ನಾನು ಸಮ್ಮಿಶ್ರ ಸರ್ಕಾರದಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ, ಕರ್ನಾಟಕದ ಸಮಸ್ತ ಜನತೆಯ ಪರವಾಗಿ ಅವರಿಗೆ ಗೌರವವನ್ನೂ ಕೂಡ ಕೊಟ್ಟಿದ್ದೇನೆ. ರಾಜ್ಯದ ರಾಜಕೀಯದಲ್ಲಿ ಸಾಕಷ್ಟು ಕಳವಳಪಡುವಂತಹ ಯಾವ ಪರಿಸ್ಥಿತಿ ಇತ್ತೆಂದರೆ, ಶ್ರೀಮಾನ್ ಎಸ್. ಎಂ. ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ, ಮಲ್ಲಿಕಾರ್ಜುನ ಖರ್ಗೆಯವರು ಗೃಹಸಚಿವರಾಗಿದ್ದಾಗ, ಕಾಡುಗಳ್ಳ ವೀರಪ್ಪನ್ ಅವರನ್ನು ಅಪಹರಣ ಮಾಡಿಕೊಂಡು ಹೋದಾಗ, ಅದು ಇಡೀ ನಮ್ಮ ರಾಜ್ಯದ ಜನತೆಯಲ್ಲಿ ಒಂದು ದೊಡ್ಡ ವಿಷಾದ, ಒಂದು ದುಃಖವನ್ನು ಕೂಡ ಉಂಟು ಮಾಡಿತ್ತು. ಆಗಿನ ಕಾಲದಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ಪ್ರಯತ್ನದಿಂದ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಜನರ ನಿರೀಕ್ಷೆಯ ಮೇರೆಗೆ ಅವರನ್ನು ಬಿಡುಗಡೆಮಾಡಿದರು, ಇಡೀ ರಾಜ್ಯದ ಜನತೆ ಸಂತೋಷವನ್ನು ವ್ಯಕ್ತಮಾಡಿದರು. ನಿನ್ನೆ ನಾನು ಹೇಳಿದ್ದು ಬೇರೆ, ಇವತ್ತು ರಾಜ್‌ಕುಮಾರ್‌ರವರು ತೀರಿ ಹೋದ

ಮೇಲೆ ಇಡೀ ಕರ್ನಾಟಕದಲೆಲ್ಲಾ ವಿಶೇಷವಾಗಿ ಬೆಂಗಳೂರು ನಗರದಲ್ಲಿ ದುಃಖದ ಛಾಯೆ ಇತ್ತು .ಇವತ್ತು ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡ ಮೇಲೆ ಸಮಿಶ್ರ ಸರ್ಕಾರವನ್ನು ನಡೆಸುವ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಏನಿದ್ದಾರೆ ಈ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿತ್ತು. They have to anticipate. ಏನು ಬಹಳ ಕಾನೂನನ್ನು ಉಲ್ಲಂಘನೆ ಮಾಡುವ ಜನರಿದ್ದಾರೆ, ಅವರು ಯಾವ ಕಾಲದಲ್ಲೂ ಕೂಡ ಇದ್ದಾರೆ, ರಾಜ್‌ಕುಮಾರ್‌ರವರ ಅಂತ್ಯಕ್ರಿಯೆಯನ್ನು ಗೌರವಪೂರ್ವಕವಾಗಿ ಮಾಡುವ ಕೆಲಸ ಸರ್ಕಾರದ್ದು. ನಾವು ಖರ್ಗೆಯವರೆಲ್ಲಾ ತುಮಕೂರಿನಲ್ಲಿದ್ದೆವು ಸುದ್ದಿ ಬಂತು. ನಾನು ಅವರ ಮನೆಗೆ ಹೋದೆ, ಪಾರ್ವತಮ್ಮನವರು ಮತ್ತು ಚಿನ್ನೇಗೌಡರನ್ನು ಭೇಟಿಯಾದೆ, ತದನಂತರ ರಾಜ್ ಕುಮಾರ್ ರವರ ಶವವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂಬ ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿಲ್ಲ, ಈ ರೀತಿ ಯಾವ ಕಾಲದಲ್ಲೂ ಆಗಿಲ್ಲ. ಏನು ಪ್ಯಾಲೇಸ್‌ಗೆ ತೆಗೆದುಕೊಂಡು ಹೋಗಬೇಕಾ, ಏನು ಪೂರ್ಣಪ್ರಜ್ಞ ಸ್ಕೂಲ್‌ಗೆ ತೆಗೆದುಕೊಂಡು ಹೋಗಬೇಕಾ ಎಂಬ ಬಗ್ಗೆ ನಿರ್ಧಾರವಾಗಿರಲಿಲ್ಲ ಇವತ್ತು ಸರ್ಕಾರ ನಡೆಸುವಾಗ you have got the officers ಪೋಲಿಸ್ ಆಫೀಸರ್ಸ್ ಇದ್ದಾರೆ. you have to take a decision.ಏನು ಮಾಡುವುದಕ್ಕಾಗಲಿಲ್ಲ, ಅತಂತ್ರಸ್ಥಿತಿಯಲ್ಲಿ ರಾಜ್ಯ ಕಣ್ಮಣಿಯಾದ, ನಮ್ಮೆಲ್ಲರ ಅಭಿಮಾನಕ್ಕೆ ಪಾತ್ರ ರಾಗಿರುವ ರಾಜ್‌ಕುಮಾರ್‌ರವರ ಶವವನ್ನು ಯಾವ ಕಡೆಗೆ ತೆಗೆದುಕೊಂಡು ಹೋಗಬೇಕೆಂಬುದು ಇವರಿಗೆ ಗೊತ್ತಾಗಲಿಲ್ಲ. ಕೊನೆಗೆ ಕಂಠೀರವ ಸ್ಟೇಡಿಯಂಗೆ ಕೊಂಡೊಯ್ದು, ಅಂತ್ಯ ಸಂಸ್ಕಾರ ಮಾಡುವ ಸಮಯವನ್ನು ನಿಗದಿ ಮಾಡಿದ ಮೇಲೆ, ಅಲೆಲ್ಲಾ ಕಡೆಯಲ್ಲೂ ಜನಸ್ತೋಮ. ನಿಮಗೆ ಗೊತ್ತಾಗಬೇಕು, ಇವತ್ತು ಇಂತಹ ದೊಡ್ಡ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡ ಮೇಲೆ, ಜನರ ಏನು ಭಾವನೆಗಳಿವೆ, ಜನರು ಯಾವ ರೀತಿಯಾಗಿ ನೋಡುವುದಕ್ಕೆ ಅಪೇಕ್ಷೇಪಡುತ್ತಿದ್ದಾರೆ, ಅದೆಲ್ಲವನ್ನು ಕೂಡ ಸರಿಯಾದ ರೀತಿಯಲ್ಲಿ ನಿರೀಕ್ಷಿಸಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು But you have faild. ನಿಮ್ಮಿಂದ ಮಾಡುವುದಕ್ಕಾಗಲಿಲ್ಲ, ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲನೆಯದಾಗಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ, ಸರ್ಕಾರ ಇದೆಯೋ ಇಲ್ಲವೋ ಎನ್ನುವ ಭಾವನೆ ಕೂಡ ಜನರ ಮನಸ್ಸಿನಲ್ಲಿ ಬಂದಿದೆ. ನಿನ್ನೆ ಮಾತನಾಡುವ ಸಮಯದಲ್ಲಿ ಅವರು ಹೇಳಿದರು, ಮುಖ್ಯಮಂತ್ರಿಗಳು ರಾಜ್‌ಕುಮಾರ್‌ರವರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಹೋಗುತ್ತಾರೆ

ಅಂತ ಇವತ್ತು Karnataka Police is one of the best police in the country. ನಾನೂ ಕೂಡ 1990 ರಲ್ಲಿ ಗೃಹ ಸಚಿವನಾಗಿ ಕೆಲಸ ಮಾಡಿದ್ದೇನೆ, ಖರ್ಗೆಯವರೂ ಕೂಡ ಮಾಡಿದ್ದಾರೆ, ಇವತ್ತು ಅವರಿಗೆ ಡೈಕೆಕ್ಷನ್ ಲೆಸೆ ಏನೂ ಕೂಡ ಅವರಿಗೆ ಆದೇಶವಿಲ್ಲ. ಇವತ್ತು ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಏನೋ ಹಾಗೋ ಹೀಗೂ ಮಾಡಿ ಶಿವಕುಮಾರ್‌ರವರು ಹೋಗಿ ತಲುಪಿದರು. ಎಲ್ಲವನ್ನೂ ನೋಡಿದ್ದೇವೆ.ಅವರು ಟಿವಿಯಲ್ಲಿ ಮಾತನಾಡಿದರು. ನಾನೂ ಕೂಡ ಹೊರಟೆ, ಬಸವೇಶ್ವರ ಸರ್ಕಲ್‌ಗೆ ಬಂದ ಮೇಲೆ, ನಮಗೆ ಡಿಸಿಪಿಯವರು "ಸರ್, ನೀವು ಬರುವುದಕ್ಕಾಗುವುದಿಲ್ಲ, ಬಂದರೆ ದೊಡ್ಡ ಅನಾಹುತವಿದೆ" ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ಇತ್ತು ಇವತ್ತು ಸ್ಪಷ್ಟವಾದ ಬದ್ಧತೆ ಇಲ್ಲ, ಯಾವ ರೀತಿಯಾಗಿ ಕೆಲಸ ಮಾಡಬೇಕೆನ್ನುವ ಜಾಗ್ರತೆ ಇಲ್ಲ, ಇವತ್ತು ನೀವು ಇದಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಲಿಲ್ಲ. ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಮುಖ್ಯಮಂತ್ರಿಗಳು ಹೋಗುತ್ತಾರೆ, ಕರ್ನಾಟಕದ 5 ಕೋಟಿ 45 ಲಕ್ಷ ಜನರ ಪ್ರತಿನಿಧಿ ಮುಖ್ಯಮಂತ್ರಿ. ಯಾವುದೇ ಪಕ್ಷದ ಸರ್ಕಾರವಿರಲಿ, ಯಾವುದೇ ಪಕ್ಷಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ನಿಂತಿಲ್ಲ, ಇವತ್ತು ಒಬ್ಬ ರಾಜ್ಯದ ಮುಖ್ಯಮಂತ್ರಿ, ಕೊನೆಯಲ್ಲಿ ನಡೆಯುವ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಹೋಗಿ ಗೌರವ ಅರ್ಪಿಸುವಂತಹ ಸಮಯದಲ್ಲಿ, ಅವರಿಗೂ ಹೋಗುವುದಕ್ಕಾಗದೇ ವಾಪಸ್ ಬರುತ್ತಾರೆ. ಯಡಿಯೂರಪ್ಪನವರು, ಅನಂತ್‌ಕುಮಾರ್‌ರವರು ಹೋದರು, ಅವರೇನು ಗತಿಯಾಯಿತು ಎನ್ನುವುದನ್ನೆಲ್ಲ ಟಿವಿಯಲ್ಲಿ ನೋಡಿದ್ದೇವೆ, ಅವರೂ ಕೂಡ ಹೇಳುತ್ತಿದ್ದಾರೆ. ಇವತ್ತು ಇಷ್ಟೇ ಅಲ್ಲ, ಹೊರದೇಶದಿಂದ ಸಾಕಷ್ಟು ಜನರು ಬಂದರು ರಜನಿಕಾಂತ್ ಬಂದರು, ಬಾಂಬೆಯಿಂದ ಬಂದರು ಹೈದರಾಬಾದ್‌ನಿಂದ ಬಂದರು, ಎಲ್ಲಾ ಕಡೆಯಿಂದ ಬಂದರು ಯಾರಿಗೂ ಕೂಡ ಅಲ್ಲಿಗೆ ಹೋಗಿ ಭಾಗವಹಿಸುವುದಕ್ಕಾಗಲಿಲ್ಲ. ಇವತ್ತು ಅಣ್ಣಾ ದೊರೈರವರ ರೀತಿಯಲ್ಲಿ ಸಾಕಷ್ಟು ದೊಡ್ಡ ವ್ಯಕ್ತಿಗಳ ಸಾವಾಗಿರಬಹುದು, ಎಂ.ಜಿ. ರಾಮಚಂದ್ರನ್‌ರವರು ಸತ್ತ ಮೇಲೆ ಸಾಕಷ್ಟು ದುರ್ಘಟನೆಯಾಗಿರ ಬಹುದು, ರಾಮರಾವ್‌ರವರ ಅಂತ್ಯಕ್ರಿಯೆಯಲ್ಲಿ ಆಗಿರಬಹುದು, ಇವತ್ತು ಕರ್ನಾಟಕದಲ್ಲಿ ಪ್ರಜಾಪ್ರಭುತ್ವದ ಸರ್ಕಾರ ವ್ಯವಸ್ಥಿತ ರೀತಿಯಲ್ಲಿ ಅಂತ್ಯಕ್ರಿಯೆ ಮಾಡುವುದಕ್ಕಾಗಲಿಲ್ಲ. ಇವತ್ತು ಸರ್ಕಾರಿ ಯಂತ್ರ ವಿಫಲವಾಗಿದೆ ಸರಿಯಾದ ವ್ಯವಸ್ಥೆ ಮಾಡುವುದಕ್ಕಾಗಲಿಲ್ಲ, ಸರಿಯಾದ ರೀತಿಯಲ್ಲಿ ಆದೇಶ ಕೊಟ್ಟಿಲ್ಲ

ಇದಕ್ಕಾಗಿ ಸಾಕಷ್ಟು ಗಲಾಟೆಯಾಯಿತು. ಆ ಗಲಾಟೆಯ ಮಧ್ಯದಲ್ಲಿ, ಮಾನ್ಯ ಸದಸ್ಯರಾದ ನರೇಂದ್ರ ಬಾಬುರವರು ಹೇಳಿದರು. ಎಂಟು ಜನ ಸತ್ತು ಹೋಗಿದ್ದಾರೆ, ಮೊನ್ನೆ ನಾವು ಪ್ರತಿಭಟನೆ ಮಾಡಿದ್ದೇವೆ, ಕರ್ನಾಟಕ ರಾಜ್ಯದಲ್ಲಿ ಯಾರೇ ಅಮಾಯಕರು ಸತ್ತರು ನಿಶ್‌ಪಕ್ಷಪಾತವಾಗಿ ಇವತ್ತು ಪರಿಹಾರವನ್ನು ಕೊಡಬೇಕು, ಕೊಡಬೇಕೆನ್ನುವ ಕಾನೂನು ಇದೆ, ನಿಯಮವಿದೆ, ಇಲ್ಲಿಯವರೆಗೆ ಮಾಡುವುದಕ್ಕಾಗಲಿಲ್ಲ. ಮುಖ್ಯಮಂತ್ರಿಗಳು, ರಿಸಾರ್ಟ್‌ನಲ್ಲಿ ಮೀಟಿಂಗ್ ಆಯಿತೆಂದು ಹೇಳುತ್ತಾರೆ, "ಏನಾಯಿತೆಂದು ನನಗೆ ಗೊತ್ತಿದೆ " ಎಂದು ಇವತ್ತು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹೀಗೆ ಪಾರಾಗುತ್ತಾ ಹೋಗುತ್ತಿದ್ದಾರೆ, ಯಾರು ಮಾಡಿದ್ದಾರೆಂದು ನನಗೆ ಗೊತ್ತಿದೆ. ಸಮಯ ಬಂದಾಗ ಹೇಳುತ್ತೇವೆ. ಎಲ್ಲಿ ಸಭೆಯಾಯಿತು? ನೀವು ಹೇಳ್ರಿ, ನೀವು ಸರ್ಕಾರ ನಡೆಸತಕ್ಕಂಥವರು ಹೇಳುವುದಕ್ಕೆ ಇಷ್ಟು ದಿವಸಗಳು ಬೇಕಾ? What your Intelligence is doing? ಇವತ್ತು ನೀವು ಇಂಟಲಿಜೆನ್ಸ್ ರಿಪೋರ್ಟ್ ತರಿಸಿ, ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ಜೈಲಿಗೆ ಹಾಕಿ, ಅವರು ಯಾವುದೇ ಪಕ್ಷದವರಾಗಿರಲಿ, ಅದನ್ನು ಮಾಡುವುದಕ್ಕೆ ಇವತ್ತು ನಿಮಗಾಗುತ್ತಿಲ್ಲ ಅದಕ್ಕಾಗಿ ಆಗೋ ಹೀಗೋ ಎಂದು ತೋರಿಸುತ್ತಿದ್ದೀರಿ. ಅದಕ್ಕಾಗಿ ನಾವು ಮೊನ್ನೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಪ್ರತಿಭಟನೆಯನ್ನು ಮಾಡಿದ್ದೇವೆ, ಎಲ್ಲಾ ಕಡೆ ಹೇಳಿದ್ದೇವೆ, ಜನಾಭಿಪ್ರಾಯ ಮೂಡಿಸುವಂತಹ ರೀತಿಯಲ್ಲಿ ಇವತ್ತು ಈ ಒಂದು ಅನಾಹುತ ಈ ರಾಜ್ಯದಲ್ಲಿ ನಡೆದಿದೆ, ಕಾನೂನು ವ್ಯವಸ್ಥೆ ಕುಸಿದು ಹೋಗಿದೆ. ಆಡಳಿತ ಮಾಡುವ ಸಾಮರ್ಥ್ಯ ನಿಮಗೆ ಇಲ್ಲ. ಯಾವಾಗಲೂ ಸರ್ಕಾರ ನಡೆಸುವವರಿಗೆ ಅದರ ಒಂದು ಅಭಿಲಾಷೆ ಇರುತ್ತದೆ, ಇಚ್ಛೆ ಇರುತ್ತದೆ. ಇವತ್ತು ನಿಮಗೆ ಕುರ್ಚಿಯ ಮೇಲೆ ಕುಳಿತುಕೊಳ್ಳುವುದಕ್ಕೆ ಬೇಕು, ಆದರೆ ವ್ಯವಸ್ಥೆ ಮಾಡುವುದಕ್ಕೆ ಹಿಂಜರಿಯುತ್ತೀದ್ದರೆಂದರೆ, ಏಕೆ ನೀವು ಅಧಿಕಾರದಲ್ಲಿರಬೇಕು? ಅದಕ್ಕೆ ನಾವು, ಮುಖ್ಯಮಂತ್ರಿ, ಹಾಗೂ ಉಪ ಮುಖ್ಯಮಂತ್ರಿಗಳಿಗೆ ಹೇಳಿದ್ದೇವೆ. ಇವತ್ತು ರಾಜ್ಯವನ್ನು ನಡೆಸುವುದಕ್ಕೆ ಏನೊಂದು ದಕ್ಷತೆ ಬೇಕು, ಏನು ನಿಪುಣತೆ ಬೇಕು, ಅದು ನಿಮಗೆ ಇಲ್ಲ ಸಾರ್ವಜನಿಕರ ಮನಸ್ಸಿನಲ್ಲೇನು ಭಾವನೆಗಳಿವೆ, ಅದಕ್ಕೆ ಇವತ್ತಿನ ದಿವಸ ಸ್ಪಂದಿಸಬೇಕಾಗುತ್ತದೆ, ನೀವು ಸ್ಪಂದಿಸಿಲ್ಲ.

12.00

ಇವತ್ತು ನಾವು ನಿಲುವಳಿ ಸೂಚನೆ ಯಾಕೆ ತಂದಿದ್ದೇವೆ ಅಂದರೆ ಇದರ ಬಗ್ಗೆ ಖರ್ಗೆಯವರಾಗಲಿ ರಮೇಶ್‌ಕುಮಾರ್ ಆಗಲಿ ಕುಮಾರ್ ಬಂಗಾರಪ್ಪ,

ಶಿವಕುಮಾರ್ ಆಗಲಿ ಬಹಳಷ್ಟು ಸದಸ್ಯರು ಭಾಗವಹಿಸಬೇಕಾಗಿದೆ, ಕೆಲವಾರು ವಿಷಯಗಳನ್ನು ಹೇಳಬೇಕಾಗಿದೆ. ಇವತ್ತು ರಾಜ್ಯದಲ್ಲಿ ಏನು ಘಟನೆ ನಡೆದಿದೆ ಅದಕ್ಕೆ ನಿನ್ನೆ ಗೌರವಶ್ರದ್ಧಾಂಜಲಿ ಅರ್ಪಿಸಿದೆವು. ಆದರೆ ಅವರ ಅಂತ್ಯಕ್ರಿಯೆಯಲ್ಲಿ ಆದ ಘಟನೆಗಳೇನಿವೆ ಕರ್ನಾಟಕದ ಜನತೆ ಮನಸ್ಸಿನಲ್ಲಿ ಏನು ಭಾವನೆಗಳಿವೆ ಅದಕ್ಕೆ ಸರ್ಕಾರ ಸ್ಪಂದಿಸಿಲ್ಲ ಹಾರೈಕೆಯ ಹೇಳಿಕೆ ನೀಡುತ್ತಿದ್ದಾರೆ; ಅದಕ್ಕೆ ಒಂದು ಸ್ಪಷ್ಟ ಉತ್ತರ ಕೊಡಬೇಕು ಎಂದು ನಿಲುವಳಿ ಸೂಚನೆ ತಂದಿದ್ದೇವೆ. ಇದರ ಬಗ್ಗೆ ನೀವು ವಿವರವಾದ ಹೇಳಿಕೆ ನೀಡಬೇಕಾಗಿತ್ತು ನಮ್ಮ ಯುವ ಶಾಸಕರೂ ಸಾಕಷ್ಟು ಇದರಲ್ಲಿ ಹೇಳಬೇಕಾಗಿತ್ತು. ಈ ಹಿನ್ನಲೆಯಲ್ಲಿ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕು. ಒಂದು ವಿವರ ಚರ್ಚೆ ಈ ಸದನದಲ್ಲಿ ನಡೆದು ರಾಜ್ ಕುಮಾರ್ ಅಭಿಮಾನಿಗಳು ಯಾರು ಕರ್ನಾಟಕದಲ್ಲಿದ್ದಾರೆ, ಸರ್ಕಾರ ಮಾಡದೇ ಇದ್ದ ವ್ಯವಸ್ಥೆಯಿಂದ ಏನು ಈ ದುರ್ಘಟನೆ ಆಗಿದೆ ಅದರ ಬಗ್ಗೆ ಸರ್ಕಾರ ಸ್ಪಷ್ಟ ಹೇಳಿಕೆ ಕೊಡಲೇ ಬೇಕಾಗುತ್ತದೆ. ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇವೆ, ಇದು ಪ್ರಸ್ತಾಪ ಅಷ್ಟೇ. ಇದಕ್ಕೆ ತಾವು ಅವಕಾಶ ಕಲ್ಪಿಸಿ ಕೊಡಬೇಕು. ವಿವರವಾದ ಚರ್ಚೆಯಾಗಬೇಕು ಅಂತ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳಿದ್ದೇನೆ. ಇದು ಕಾನೂನು ಸುವ್ಯವಸ್ಥೆ ಪ್ರಶ್ನೆಯಾಗಿದೆ. ಆದ್ದರಿಂದ ನಿಲುವಳಿ ಸೂಚನೆ ಕೆಳಗೆ ಅವಕಾಶ ಕೊಡಲು ಬರುವುದಿಲ್ಲ. ಆ ಕಾರಣದಿಂದ 69ರ ಅಡಿಯಲ್ಲಿ ಇದನ್ನು ಮಧ್ಯಾಹ್ನ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಮ್ಮ ಮನವೊಲಿಸಲು ಪ್ರಯತ್ನಿಸುತ್ತೇವೆ. ಅದರಲ್ಲಿ ವಿಫಲವಾದರೆ ನೀವು ಪುನಃ ಚರ್ಚೆಗೆ ತೆಗೆದುಕೊಳ್ಳಿ ಇದಕ್ಕೆ ಬೇಕಾಗಿರುವ ingredients fulfill ಮಾಡದೆ ಇದ್ದರೆ ಇದನ್ನು ತಳ್ಳಿಹಾಕಲು ತಮಗೆ ಸಂಪೂರ್ಣ ಅಧಿಕಾರ ಇದೆ, ತಳ್ಳಿ ಹಾಕಿ. ಆದರೆ ಕನಿಷ್ಟ ಆರಂಭಿಕ ಪ್ರಸ್ತಾವಕ್ಕೆ ಅವಕಾಶ ಕೊಟ್ಟರೆ ಐದೈದು ನಿಮಿಷ ನಾವು ಮಾತನಾಡುತ್ತೇವೆಯೇ ಹೊರತು, ಸದನದ ಸಂಪೂರ್ಣ ಸಮಯ ಹಾಳುಮಾಡಬೇಕೆಂಬ ದೃಷ್ಟಿ ನಮಗಿಲ್ಲ. ಆದ್ದರಿಂದ ಐದೈದು ನಿಮಿಷ ಅವಕಾಶ ಮಾಡಿಕೊಡಿ, ಆನಂತರ ನಿಮ್ಮ ಭಾವನೆ ವ್ಯಕ್ತಮಾಡಿ.

Mr. SPEAKER: Ingredients ಏನು ಅಂತ ನನಗೆ ಅರ್ಥವಾಗಿದೆ. ಇದು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಿದ್ದು. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಸಬ್‌ಮಿಶನ್‌ನಲ್ಲಿ ಸ್ಪಷ್ಟಪಡಿಸಿದ್ದಾರೆ. ಕಾನೂನು ಸುವ್ಯವಸ್ಥೆ ವಿಷಯವನ್ನು ನಿಲುವಳಿ ಸೂಚನೆಯಡಿ ತರಲು ಬರುವುದಿಲ್ಲ.

ಆದಕ್ಕಾಗಿ ಅದರ ಕೆಳಗೆ ಅನುಮತಿ ಕೊಡಲು ನಾನು ನಿರಾಕರಿಸುತ್ತಿದ್ದೇನೆ. ಇದನ್ನು 69ರಡಿ ತೆಗೆದುಕೊಂಡು ಎಲ್ಲರಿಗೂ ಒಂದು ಅವಕಾಶ ಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮ ಸರ್ಕಾರ ಮಾಡಿದ ಕೆಲಸ ನೋಡಿ ಇಡೀ ದೇಶ ನಕ್ಕಿದೆ. ಇದು ಬರುವುದಿಲ್ಲ ಅಂದರೆ ಯಡಿಯೂರಪ್ಪನವರು ಈ ಸ್ಥಾನದಲ್ಲಿ ಕೂತಿದ್ದರೆ ಏನು ಮಾಡುತ್ತಿದ್ದರು?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅಧ್ಯಕ್ಷರೇ, ನಿಮ್ಮ ತೀರ್ಮಾನವೇ ಆಗಲಿ.

Mr. SPEAKER: You have to assist us.

SRI K.R. RAMESHKUMAR: I am willing to assist, coope - rate, coordinate. Kindly allow me to have my prayer submitted. ನಾವು ನಿಲುವಳಿ ಸೂಚನೆ ಮೂವ್ ಮಾಡಿದಾಗ ಪ್ರಾಸ್ತಾವಿಕ ಮನವಿಯನ್ನು ಒಬ್ಬರೋ ಇಬ್ಬರೋ ಮೂವರೋ ಸಲ್ಲಿಸಿದ್ದಾದ ಮೇಲೆ ನೀವು "ನೀವು ಹೇಳಿದ್ದೇಲ್ಲಾ ಕೇಳಿದ್ದೇನಪ್ಪ ಈ ವಿಷಯ ಹೀಗೆ ಬರುತ್ತದೆ ಈ ರೀತಿ ತೀರ್ಮಾನ ಕೊಡುತ್ತಿದ್ದೇನೆ" ಅಂದರೆ ಪರವಾಗಿಲ್ಲ. ಆದರೆ you have already come to the conclusion and thereby you are going to set up a new precedent. ಸ್ಪೀಕರ್ ರೂಲಿಂಗನ್ನು ನಾನು ಪ್ರಶ್ನೆ ಮಾಡುವುದಿಲ್ಲ If you say that it is your final order, I will obey. ಆದರೆ ದಯಮಾಡಿ ಒಂದು ಮನಸ್ಸಿನಲ್ಲಿಟ್ಟುಕೊಳ್ಳಿ: ಈ ಸದನದಲ್ಲಿ ತಾವೊಂದು ಹೊಸ ಪದ್ಧತಿ ಪ್ರಾರಂಭಿಸುತ್ತಿದ್ದೀರಿ. ಅದಕ್ಕೆ ತಾವು ಭಾಗಿ ಆಗುತ್ತೀರಿ ಅದರ ಮೇಲೆ I leave it to your conscience. I am not here to question your order.

ಶ್ರೀ ಬಸವರಾಜ ಹೊರಟ್ಟಿ: ತಾವು ಸ್ಪೀಕರ್ ಆಗಿದ್ದವರು, ಬಿಎಸಿಯಲ್ಲಿ ಒಪ್ಪಿಕೊಂಡು ವಿರೋಧಿ ಪಕ್ಷದ ನಾಯಕರು ಮಾತನಾಡಿದ ನಂತರ ಇದಕ್ಕೆ ಚರ್ಚೆ ಮಾಡೋಣ, ತಾವೇನು ರೂಲಿಂಗ್ ಕೊಡುತ್ತೀರೋ ಒಪ್ಪಿಗೆ ಅಂತ ಹೇಳಿದ್ದಿರಿ. ಈಗ ರೂಲಿಂಗ್ ಕೊಟ್ಟಿದ್ದಾರೆ, 69 ತೆಗೆದುಕೊಳ್ಳಲು ಅಲೋ ಮಾಡಿದ್ದೀರಿ, ಎಲ್ಲರಿಗೂ ಕೊಡಬೇಕು ಅಂತ ಇಲ್ಲ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ತಮ್ಮ ಪಕ್ಷಕ್ಕೆ ಅವಕಾಶ ಕೊಟ್ಟ ಹಾಗಾಯಿತು.

ಶ್ರೀ ಡಿ.ಕೆ. ಶಿವಕುಮಾರ್: ಇದನ್ನು ರಿಜೆಕ್ಟ್ ಮಾಡಬೇಕು ಅಂತ ಮೈಂಡ್‌ನಲ್ಲಿ, ...

ಶ್ರೀ ಬಸವರಾಜ ಹೊರಟ್ಟಿ: BACಯಲ್ಲಿ ತೀರ್ಮಾನ ಮಾಡಿದ್ದಾರೆ ಇನ್ನೇನು ಮಾಡಬೇಕು?

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಬಹಳ ಆತುರದಲ್ಲಿದ್ದೀರಿ, ಎಂ.ಪಿ. ಪ್ರಕಾಶರು ಇಲ್ಲಿ ಇದ್ದಾರೆ. He has also worked in this House as Parliamentery Affairs Minister. Adjournment Motion move ಮಾಡಿದಾಗ ಕನಿಷ್ಟ ನಾಲ್ಕು ಸದಸ್ಯರಿಗೆ preliminary submission ಮಾಡಲು ಅವಕಾಶ ಕೊಟ್ಟು ಆಮೇಲೆ ಸ್ಪೀಕರ್‌ರವರು ಒಂದು ನಿಲುವು ತೆಗೆದುಕೊಳ್ಳುವುದು ಉಚಿತವೇ ಸಥವಾ ಅವರು ಹೇಳಿದ ಕೆಲವು ಮಾತುಗಳನ್ನೇ ಆಧಾರವಾಗಿಟ್ಟುಕೊಂಡು ರೂಲಿಂಗೆ ಕೊಡುವುದು ಸರಿಯಾ ಅಂತ ಹೇಳಲಿ; ಅದು ಈ ಸದನಕ್ಕೆ ಭೂಷಣ ತರುತ್ತದೆ, ಮುಂದೆ ಹೀಗೆ ನಡೆಸಿಕೊಂಡು ಹೋಗೋಣ, ಈ ಪದ್ಧತಿ ಅನುಕೂಲ ವಾಗಿರುತ್ತೆ ಅಂತ ತಾವೆಲ್ಲಾ ಹೇಳುವುದಾದರೆ ಈ ಸಭೆಗೆ ಹೊರತಾಗಿ ನಡೆದುಕೊಳ್ಳಲು ನಾನು ತಯಾರಿಲ್ಲ. ಇದು ಸರೀನಾ ಎಂಬುದನ್ನು ಅವರ ವಿವೇಚನೆಗೆ ಬಿಡೋಣ. ಅವರು ಮಾಡಿರುವುದು ಸರಿ ಅನ್ನುವುದಾದರೆ ನನಗೆ ಬಹಳ ಖುಷಿ.

ಅಧ್ಯಕ್ಷರು: ತಾವು ಹಿರಿಯರು, ಸ್ಪಷ್ಟವಾಗಿ ನಿಮ್ಮ ನಾಯಕರು ಹೇಳಿದ್ದಾರೆ, ಇದನ್ನು ನಿಲುವಳಿ ಸೂಚನೆ ಕೆಳಗೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ನಾನು ರೂಲಿಂಗ್ ಕೊಟ್ಟಿದ್ದೇನೆ ದಯಮಾಡಿ ಸಹಕರಿಸಿ. ನಿಯಮ 69ರ ಕೆಳಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಾಯಕರು ಕೆಲವು ವಿಷಯ ಹೇಳಿದ್ದಾರೆ ಸಾಂಕೇತಿಕವಾಗಿ ಅವರು ನಮ್ಮ ನಾಯಕರಾಗಿದ್ದರಿಂದ ಅವರ ಮೂಲಕ ನಮ್ಮ ಪ್ರಾತಿನಿಧ್ಯ ಪ್ರಾರಂಭಿಸುತ್ತೇವೆ. ಅವರು ಎಲ್ಲಾ ವಿಷಯಗಳನ್ನೂ ಪ್ರಸ್ತಾಪಿಸಿರಬೇಕು ಅಂತ ಏನಿಲ್ಲ. ಅವರು ಹೇಳದೇ ಇರುವುದನ್ನು ನಾವು ಪ್ರಸ್ತಾಪಿಸುವ ಸಂಭವ ಇರುತ್ತದೆ. ಆ ಕಾರಣದಿಂದಲೇ 3–4 ಮಂದಿಗೆ ಪ್ರಸ್ತಾವಿಕ ಮನವಿ ಸಲ್ಲಿಸಲು ಅವಕಾಶ ಕೊಡುವುದು ಈ ಸದನದಲ್ಲಿ ಇದುವರೆಗೂ ನಡೆದುಬಂದ ಪದ್ಧತಿ.ಅದಕ್ಕೆ ಅವಕಾಶವಿಲ್ಲ, ತಾವು ಕೊಟ್ಟ ತೀರ್ಪು ಅಂತಿಮ ಅನ್ನುವುದಾದರೆ ನಾವು ನಿಮ್ಮ ತೀರ್ಪನ್ನು ಪ್ರಶ್ನಿಸುವುದಿಲ್ಲ. ಹೊಸ ಪದ್ಧತಿಗೆ ನೀವು ನಾಂದಿ ಹಾಕಿದಂತಾಗುತ್ತದೆ. ಎಲ್ಲವನ್ನೂ ನಿಮ್ಮ ವಿವೇಚನೆಗೆ ಬಿಡುತ್ತಾ ಇದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ವಿರೋಧ ಪಕ್ಷದವರು ನಿಲುವಳಿ ಸೂಚನೆ ತಂದಿದ್ದಾರೆ. ಬಿಎಸಿ ಯಲ್ಲೂ ಇದರ ಬಗ್ಗೆ ಪ್ರಸ್ತಾಪಿಸುತ್ತಾ ಇದನ್ನು 69ಕ್ಕೆ ಪರಿವರ್ತಿಸಿ ಪ್ರತಿಯೊಬ್ಬರೂ ಚರ್ಚೆಯಲ್ಲಿ ಭಾಗವಹಿಸಲಿ ಎಂಬ ನಿರ್ಣಯಕ್ಕೆ ಬಂದಿರಿ. ಮಾನ್ಯ ರಮೇಶ್‌ಕುಮಾರ್ ಹೇಳಿದಂತೆ ಈ ಮೋಷನ್‌ಗೆ ಸಹಿ ಮಾಡಿರುವೆ 10 ಜನರನ್ನೆಲ್ಲಾ ಕೇಳಬೇಕು ಎಂಬ ಸಂಪ್ರದಾಯವಂತ್ತೂ ಇಲ್ಲಿದೆ.

ಆದರೂ ನಿರ್ಣಯದ ಹಿನ್ನಲೆಯಲ್ಲಿ ತಾವೇನು ಹೇಳಿದಿರಿ ಈಗಾಗಲೇ ನಿಮ್ಮ ನಾಯಕರು ಈ ವಿಚಾರ ಪ್ರಸ್ತಾಪಿಸಿದ್ದಾರೆ ಎಲ್ಲರೂ ಪ್ರಾಥಮಿಕ ವಿಚಾರಗಳನ್ನು ಹೇಳಿ ತಮ್ಮ ಮನವೊಲಿಸಲು ಪ್ರಯತ್ನ ಮಾಡಿದಾಗ ಅದರಲ್ಲಿ ಅನೇಕ ಮೆರಿಟಿಗೆ ಸಂಬಂಧಿಸಿದ ವಿಚಾರಗಳು ಬಂದುಬಿಡುತ್ತವೆ. ಯಾವುದು 69ರ ಚರ್ಚೆಗೆ ಗ್ರಾಸವಾಗುತ್ತದೆ ಅದು ಈ ಸಂದರ್ಭದಲ್ಲಿ ಆಗಬಾರದು ಅಂತ ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ನಾಲ್ಕರು ಮಂದಿಯಾದರೂ ಹೇಳಬೇಕಾಗಿತ್ತು ಅಂತ ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.ಆದರೆ ನಿರ್ಣಯದಂತೆ ಇದು 69ಕ್ಕೆ ಕನೆವರ್ಟಾಗಿರುವುದರಿಂದ ನಿಮ್ಮ 10 ಮಂದಿಗೆ ಮೊದಲು ಅವಕಾಶ ಇರುತ್ತದೆ. ಆಮೇಲೆ ನಮಗೆ ಮಾತನಾಡಲು ಅವಕಾಶ ಕೊಡಿ. ಯಾಕೆಂದರೆ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಯಾವುದೇ ನಿಲುವಳಿ ಸೂಚನೆ ತರಲು ಆಗುವುದಿಲ್ಲ ಎಂದು ಸ್ವತಃ ಈ ಮನೆಯಲ್ಲಿ ಅನೇಕ ಸ್ಪೀಕರ್ಸ್ ಜಡ್ಜ್ ಮೆಂಟ್ ಕೊಟ್ಟಿರುವುದು ಇದೆ. ಎಸ್.ಆರ್. ಬೊಮ್ಮಾಯಿಯವರು ಕೊಟ್ಟಿದ್ದು ತಿರಸ್ಕಾರವಾಗಿದೆ, ದೇವರಾಜ ಅರಸರು ಕೊಟ್ಟ ನಿಲುವಳಿ ಸೂಚನೆ ತಿರಸ್ಕಾರವಾಗಿದೆ. ಈ ಹಿನ್ನಲೆಯಲ್ಲಿ ಅಡ್ಮಿಸಿಬ್ಲಿಟಿಯನ್ನೇ ಪ್ರಶ್ನಿಸುವ ಸಂದರ್ಭ ಬಂದಾಗ ಅವರೂ ಕೂಡ ಉದಾರವಾಗಿ 69ರ ಕೆಳಗೆ ಪರಿವರ್ತನೆಯಾಗಿದೆ ಎಂದರು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್ ಅವರು ಭಾಗಶಃ ಸತ್ಯವನ್ನು ಹೇಳಿದ್ದಾರೆ. ಯಾವತ್ತೂ ಸದನದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಯಾರೂ ಅಡ್ಮಿಟ್ ಮಾಡಿಕೊಳ್ಳುವುದಿಲ್ಲ. ಪ್ರಾಸ್ತಾವಿಕ ಮನವಿ ಸಲ್ಲಿಸುವ ವೇಳೆಗೆ ತಮ್ಮಲ್ಲಿರತಕ್ಕ ಎಲ್ಲಾ ವಿಚಾರಗಳನ್ನು ಕೂಡ ಟೀಕಾ ರೂಪದಲ್ಲಿ ಹೇಳತಕ್ಕದ್ದು ಇದೆ. AGenerally, that has been the practice ಅದನ್ನು ಅಧ್ಯಕ್ಷರು ಅಲ್ಟಿಮೇಟ್‌ಲಿ ಡಿಸ್‌ಅಲೋ ಮಾಡುತ್ತಾರೆ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಷಯ. ನಾವು ಯಾವತ್ತೂ ಇದು ಅಡ್ಮಿಟ್ ಆಗಿದೆ ಎನ್ನತಕ್ಕ ಮಾತನ್ನು ನಾವು ಹೇಳುತ್ತಿಲ್ಲ. ನಿಯಮ 69ಗೆ ಹಾಗೂ ನಿಲುವಳಿ ಸೂಚನೆಗೆ ವ್ಯತ್ಯಾಸ ಏನಾಗುತ್ತದೆ? An Adjournment Motion is virtually a motion that is intended to censure the Government. ನಿಯಮ 69ನಲ್ಲಿ ಚರ್ಚೆಗೆ ತೆಗೆದುಕೊಂಡಾಗ ಮಾತನಾಡಲು ಇಡೀ ಸದನಕ್ಕೆ ಅವಕಾಶ ಇರುತ್ತದೆ. ಆಗ ಬರತಕ್ಕಂಥ ಧೋರಣೆ ಸಂಪೂರ್ಣ ಬೇರೆ ಬೇರೆನೇ ಆಗುತ್ತದೆ. ಹಾಗೇ ಇಲ್ಲದೇ ಇದ್ದಿದ್ದರೆ ನಿಯಮ 69 ಬೇರೆ, ಅಡ್ಜರ್ನಮೆಂಟ್

ಮೋಷನ್ ಬೇರೆ ಎಂದು ಹೇಳಿ ಎರಡು ಫ್ರಾವಿಷನ್ ಏಕೆ ನಾವು ಇಟ್ಟುಕೊಳ್ಳಬೇಕಾಗಿತ್ತು? It is under the guise of making preliminary submission. While moving an adjournment motion opposition has its privilege to pin down the Government on each issue. Not that we entertain an illusion that you would admit the Adjournment Motion. The process of allowing to make the preliminary submission is itself a privilege conferred on us. If it is your desire to take away that privilege, sir, we have no alternative. You are going to lay down a new precedent in this House.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಅವರು ಹೇಳತಕ್ಕ ಮಾತು ಪ್ರಿಲಿಮಿನರಿ ಸಬ್ಮಿಷನ್ ಸಂದರ್ಭದಲ್ಲಿ. ಮರಿಟ್ ಆಫ್ ದಿ ಕೇಸಿಗೆ ಹೋಗಲಿಕ್ಕೆ ಯಾವ ಕಾರಣಕ್ಕೂ ಕೂಡ ನಿಯಮಾವಳಿಗಳಲ್ಲಿ ಅವಕಾಶ ಇಲ್ಲ. ಅವರೇ ಸ್ಪೀಕರ್ ಆಗಿದ್ದರು.

SRI K.R. RAMESH KUMAR: During the course of debate, it is again for the wisdom of the opposition members to raise a point of order and say, this amounts to going into merits. It is not preliminary submission ಎಂದು ಅವರು ಹೇಳಬೇಕಾಗುತ್ತದೆ. ನಾನು ಅವರಿಗೆ ಹೇಳಿ ಕೊಡಬೇಕಾಗಿಲ್ಲ. ನಾವು ಒಂದು ವೇಳೆ ಮಾತನಾಡತಕ್ಕ ವೇಳೆಯಲ್ಲಿ ಪ್ರಾಸ್ತಾವಿಕ ಮನವಿ ಸಲ್ಲಿಸುವ ವೇಳೆಗೆ ಮೆರಿಟ್ಸ್ ಆಫ್ ದಿ ಕೇಸಿಗೆ ಹೋದಾಗ ನೀವು ಕ್ರಿಯಾಲೋಪ ಎತ್ತಬಹುದು.

ಶ್ರೀ ಎಂ.ಪಿ. ಪ್ರಕಾಶ್: ಪ್ರಾಸ್ತಾವಿಕ ಮನವಿ ಸಲ್ಲಿಸುವಂತಹ ದಿಸೆಯಲ್ಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಇದೆಲ್ಲಾ ಆಂತರಿಕ ವಿಚಾರ.

ಶ್ರೀ ಎಂ.ಪಿ. ಪ್ರಕಾಶ್: ತಾವೂ ಕೂಡ ಸ್ಪೀಕರ್ ಆಗಿ ನೇಮಕ ಆಗಿ ಅನೇಕ ರೂಲಿಂಗ್ ಕೊಟ್ಟಿದ್ದೀರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಇಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಆ ಸಂದರ್ಭದಲ್ಲಿ..

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, I am not getting back from that position.

ಶ್ರೀ ಎಂ.ಪಿ. ಪ್ರಕಾಶ್: ದಯಮಾಡಿ, ಒಂದು ನಿಮಿಷ ಕೇಳಿ. ಈ ಮೋಷನ್ ಅನ್ನು ಈ ಸಂದರ್ಭದಲ್ಲಿ ತರತಕ್ಕಂಥ ಅಧಿಕಾರ ಇದೆಯೋ ಇಲ್ಲವೋ ಎಂದು ತಮಗೆ ಮನ ಒಲಿಸಬೇಕು. ಈ ಮೋಷನ್ ಅನ್ನು ನಾನು ಒಪ್ಪಿದ್ದೇನೆಂದು ತಮಗೆ ಮನವರಿಕೆ ಆದ ಮೇಲೆ ಸದನ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತದೆ. ಆ ಸಂದರ್ಭದಲ್ಲಿ ಅಂತಹ ಮೋಷನ್ ತರಲು ಅಧಿಕಾರ ಇಲ್ಲ ಎಂದು ಹೇಳಿ ಬೇರೆಯವರು ಅದಕ್ಕೆ ಪ್ರಶ್ನೆಮಾಡತಕ್ಕ ಅಧಿಕಾರನೂ ಇರುತ್ತದೆ. ಈಗ ಬಂದಿರುವ ವಿಚಾರವನ್ನು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಈ ವಿವಾದಗಳು ಬೇಡ. ಇದು ಒಂದು ವಿಶೇಷ ಸಭೆ ಎಂದು ಹೇಳಿ ಕರೆದಿರತಕ್ಕ ಹಿನ್ನಲೆಯಲ್ಲಿ ನಾವು ಏನು ವಿಧೇಯಕಗಳನ್ನು ತಂದಿದ್ದೇವೆ, ಆ ವಿಧೇಯಕ ಮೊದಲು ಚರ್ಚೆ ಆಗಬೇಕು ಎಂದು ಹೇಳಿದ್ದೇವೆ. ಆಗ ಹಿರಿಯರಾಗಿರತಕ್ಕಂಥ ತಾವೆಲ್ಲರೂ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ವಿಶೇಷ ಅಧಿವೇಶನ ಆಗಿದ್ದರೂ ಕೂಡ ನಿಲುವಳಿ ಸೂಚನೆ ತಂದಾಗ ಅದಕ್ಕೆ ಪ್ರಾಶಸ್ತ್ಯ ಇರುತ್ತದೆ, ಅದರಿಂದ ಅದನ್ನೇ ಮೊದಲು ತೆಗೆದು ಕೊಳ್ಳಬೇಕೆಂದು ತೀರ್ಮಾನ ಆಯಿತು. ಆ ಸಂದರ್ಭದಲ್ಲಿ ಸೇಲ್ ಮೇಟ್ ಆಗಿದ್ದಾಗ, ಮಧ್ಯದಲ್ಲಿ ಇದ್ದಂತಹ ಅನೇಕ ಹಿರಿಯರು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್ ಅವರು, ಮಾನ್ಯ ಶ್ರೀರಾಮರೆಡ್ಡಿಯವರು ಆ ಸಂದರ್ಭದಲ್ಲಿ ಅವರೆಲ್ಲಾ ಏನು ಹೇಳಿದರು " ನೀವು 69ರ ಕೆಳಗೆ ಇದನ್ನು ಪರಿವರ್ತನೆ ಮಾಡಿ ಎಂದು ನೀವೂ ಕೂಡ ಇದಕ್ಕೆ ಆಕ್ಷೇಪಣೆ ಮಾಡತಕ್ಕದ್ದು ಬೇಡ " ಎಂದು ಹೇಳಿದರು ಆದರೆ ಒಂದನ್ನು ನಾನು ಒಪ್ಪುತ್ತೇನೆ. ಮಾನ್ಯ ರಮೇಶ್ ಕುಮಾರ್ ಅವರು ಹೇಳಿದಂತೆ ಒಂದು 4–5 ಮಂದಿಗೆ ಅವಕಾಶ ಕೊಡಬಹುದಾಗಿತ್ತು. ಆದರೆ ಚರ್ಚೆಯ ಹಿನ್ನಲೆಯಲ್ಲಿ ಈಗಾಗಲೇ ನಿಯಮ 69ರ ಕಳಗೆ ತೆಗೆದುಕೊಳ್ಳುವುದಾಗಿದ್ದರೆ ನಮ್ಮದು ಆಕ್ಷೇಪಣೆ ಇಲ್ಲ ಎನ್ನುವಂತಹ ಮಾತನ್ನು ತಾವು ಈಗ ಹೇಳಿದ್ದೀರಿ. ಅದೂ ಒಂದು ಪ್ರೆಸಿಡೆಂಟ್; ಆಗಿರಬೇಕಾಗಿದ್ದು ಏನೂ ಅಲ್ಲ, ತಾವು ದಯವಿಟ್ಟು ಅವಕಾಶವನ್ನು ಕಲ್ಪಿಸಿಕೊಟ್ಟರೆ ವಿಧೇಯಕವನ್ನು ನಮ್ಮ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮಂಡಿಸುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಫಾರ್‌ಇನ್‌ಸ್ಟೆನ್ಸ್, ಮಾನ್ಯ ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ನಿನ್ನೆ ಕಂಡೊಲೆನ್ಸ್ ರೆಸಲ್ಯೂಷನ್ ಮೇಲೆ ಮಾತನಾಡುತ್ತಾ ಅವರು ತಾವೇ ಸ್ವತಃ ಸರ್ಕಾರವನ್ನು ಇಂಪ್ಲಿಕೇಟ್ ಮಾಡಿದ್ದಾರೆ. 69ರ ನಿಯಮದಲ್ಲಿ ಮಾತನಾಡುವಾಗ ನಾವು ಅದನ್ನು ಹೇಳುವುದಕ್ಕೆ

ಆಗುತ್ತದೆಯೇ? ಎಲ್ಲರೂ ಅದನ್ನು ಮಾತನಾಡುತ್ತಾರೆ. But while taking recourse under Adjournment Motion it takes a different route all together.

ಶ್ರೀ ಎಂ.ಪಿ. ಪ್ರಕಾಶ್: ಈಗ ನಾವು ಅಡ್ಜರ್ನಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳಬಾರದು ಎನ್ನುವಂತಹ ಒಪ್ಪಂದಕ್ಕೆ ನಾವು ಬಂದಿದ್ದೇವೆ. ಇಲ್ಲದಿದ್ದರೆ ಬಿಸಿನೆಸ್ ಅಡ್ವೈಸರಿ ಕಮಿಟಿ ಎಂದು ಏಕೆ ಇರಬೇಕಿತ್ತು? ಯಾವುದನ್ನು ಸದನದಲ್ಲಿ ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ, ನಮ್ಮ ನಮ್ಮ ಪ್ರತಿಷ್ಟೆ ಅಥವಾ ನಮ್ಮ ನಮ್ಮ..

ಶ್ರೀ ಡಿ.ಕೆ. ಶಿವಕುಮಾರ್: ಎಲ್ಲಾ ನೀವೇ ಮಾತನಾಡುತ್ತಿದ್ದಿರಲ್ಲಾ, ಪಾರ್ಲಿಮೆಂಟರಿ ಮಿನಿಸ್ಟರ್ ಮಾತನಾಡಲಿ. ಇನ್ನೂ ಮಂತ್ರಿ ಆಗುವುದಕ್ಕಿಂತ ಮುಂಚೆ ತಾವೇ ಮಾತನಾಡು ತ್ತಿದ್ದೀರಲ್ಲಾ.

ಶ್ರೀ ಎಂ.ಪಿ. ಪ್ರಕಾಶ್: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿಚಾರ ಇದ್ದಂತಹ ಕಾರಣ ಆಗಿರುವುದರಿಂದ ನಾನು ಹೇಳಿದ್ದು.

ಶ್ರೀ ಡಿ.ಕೆ. ಶಿವಕುಮಾರ್: ಗವರ್ನಮೆಂಟ್ ರಿಪ್ಲೈ ಅವರು ಮಾಡುತ್ತಿದ್ದಾರಲ್ಲಾ ಸ್ವಾಮಿ. ನಾವು ವಿರೋಧ ಪಕ್ಷದಲ್ಲಿದ್ದೇವೆ, ನಮಗೆ ಮಾತನಾಡಲು ಅವಕಾಶ ಇದೆ..

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ನಾನು ರೂಲಿಂಗ್ ಕೊಟ್ಟಿದ್ದೇನೆ. ಅದೇನೂ ಅಷ್ಟೊಂದು ಬದಲಾವಣೆ ಆಗುವುದಿಲ್ಲ. ಮಧ್ಯಾಹ್ನ ತೆಗೆದುಕೊಳ್ಳೋಣ, ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾರ್ ತಾವೇನು ಈಗ ರೂ 60 ಕೆಳಗೆ ಕೊಟ್ಟಂತಹ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು 69ಕ್ಕೆ ಏನು ಕನ್‌ವರ್ಟ್ ಮಾಡಿದಿರಿ. ನಿಮ್ಮ ರೂಲಿಂಗ್ ಬಗ್ಗೆ ನಾವು ಚಾಲೆಂಜ್ ಮಾಡುತ್ತಿಲ್ಲ. ನಾವು ನಿಮ್ಮ ಮನವನ್ನು ಒಲಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಏನು ಅಂದರೆ ರೂಲ್ 60ರ ಕೆಳಗೆ ಇದನ್ನು ನೀವು ಚರ್ಚೆಗೆ ತೆಗೆದುಕೊಳ್ಳಬಹುದು. ಅದಕ್ಕೆ ಏನು ಕಾರಣ? ಆ ಕಾರಣಗಳನ್ನು ಬೇರೆ ಬೇರೆ ಸದಸ್ಯರು ಹೇಳಬಹುದು. ನಾನು ಒಂದು ಹೇಳಬಹುದು. ಮಾನ್ಯ ರಮೇಶ್ ಕುಮಾರ್ ಅವರು ಒಂದು ಹೇಳಬಹುದು. ಮಾನ್ಯ ಸದಸ್ಯರು ಇನ್ನೊಬ್ಬರು ಇನ್ನೊಂದು ಕಾರಣ ಹೇಳಬಹುದು. ಹತ್ತು ಜನರ ಸಲಹೆಗಳನ್ನು ಕೇಳಿದ ಮೇಲೆ ಮನಸ್ಸು ಪರಿವರ್ತನೆ ಆಗುತ್ತದೆ. ಪರಿವರ್ತನೆ ಆದಾಗ ಖಂಡಿತವಾಗಿ ನೀವು ರೂಲ್ 60ರಲ್ಲಿ ಇದನ್ನು ಅಡ್ಮಿಟ್ ಮಾಡುತ್ತೀರಿ. ರೂಲ್ 60ನಲ್ಲಿ ಅಡ್ಮಿಟ್ ಮಾಡಿಸಿ

ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ. ಆದರೆ ನೀವು ನಮ್ಮ ಸಲಹೆಯನ್ನೇ ಕೇಳಲಿಲ್ಲ. ಅಥವಾ ನಾವು ಹೇಳಿದ್ದನ್ನು...

ಅಧ್ಯಕ್ಷರು : ಈಗ ಇದು ಕಾನೂನು ಮತ್ತು ಸುವ್ಯವಸ್ಥೆ ಪ್ರಶ್ನೆ ಇದೆ. ಇದರಲ್ಲಿ ಹಿಂದಿನ ಸ್ಪೀಕರ್‌ಗಳು ಬಹಳಷ್ಟು ರೂಲಿಂಗ್ಸ್ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ನೋಡಿ, ಆಮೇಲೆ ಅದನ್ನು ಹೇಳಿ ಸಾರ್.

ಅಧ್ಯಕ್ಷರು : ಇದು ಅಡ್ಜರ್ನಮೆಂಟ್ ಮೋಷನ್ ಕೆಳಗಡೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಿಮ್ಮ ನಾಯಕರು ಅದನ್ನು ಅವರು ಹೇಳುವಾಗ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಕಾನೂನು ಮತ್ತು ಸುವ್ಯವಸ್ಥೆ ಪ್ರಶ್ನೆ ಎಂದು ಹೇಳಿದ್ದಾರೆ. ಆ ಕಾರಣದಿಂದ ನಾನು 69ಗೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅದರಿಂದ ದಯಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನು ಸುವ್ಯವಸ್ಥೆ ಪ್ರಶ್ನೆ ಇರಬಹುದು. ಕಂಪಸ್ಸೇಷನ್ ಪ್ರಶ್ನೆ ಇರಬಹುದು ಅಥವಾ ಸಿಬಿಐ ಎನ್‌ಕ್ವೈರಿ ಕೇಳಿರುವ ಪ್ರಶ್ನೆ ಇರಬಹುದು. ಅಥವಾ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು "ಇದರಲ್ಲಿ ಬಹಳಷ್ಟು ಇದೆ, ನನಗೆ ಗೊತ್ತಿದೆ. ಕುತಂತ್ರಗಳು ನಡೆದಿವೆ," ಅಂತ ಅವು ಏನೇನು ಕುತಂತ್ರಗಳು ಇವೆ? ಅದನ್ನೆಲ್ಲಾ ಹೊರಗೆ ತರತಕ್ಕದ್ದೂ ಆಗಬಹುದು. ಅದಕ್ಕೆ ನೀವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಖಂಡಿತವಾಗಿ ಅದು ಆಗುತ್ತದೆ. ಆದರೆ ತಾವು ನಿಯಮ 69 ಎಂದು ಹೇಳುತ್ತಿದ್ದೀರಿ. ನಾವು 60ರಲ್ಲಿ ಅವಕಾಶ ಮಾಡಿಕೊಡಿ ಎಂದು ಏಕೆ ಹೇಳುತ್ತಿದ್ದೇವೆ ಎಂದರೆ 60ನಲ್ಲಿ ತಾವು ಪರ್ಮಿಷನ್ ಕೊಟ್ಟರೆ ಖಂಡಿತವಾಗಿ ಅದಕ್ಕೆ ಒಂದು ಗೌರವ ಬರುತ್ತದೆ. ಮತ್ತು ಈ ಡಿಸ್ಕಷನ್ಸ್‌ಗೂ ಒಂದು ಬೆಲೆ ಬರುತ್ತದೆ. ಮತ್ತು ನಾವು ಎಲ್ಲರೂ ಕೂಡ ಡಾ: ರಾಜ್‌ಕುಮಾರ್ ಅವರ ಗೌರವಾರ್ಥ ಸದನವನ್ನು ಒಂದು ದಿವಸ ಮುಂದೂಡಿದ್ದೇವೆ. ಆದರೆ ಇನ್ಸಿಡೆಂಟ್ ಬಗ್ಗೆ ಚರ್ಚೆ ಮಾಡುವುದಕ್ಕೆ 2-3 ತಾಸು ಕೊಡುವುದಿಲ್ಲವೆಂದರೆ ಇದು ಹೇಗೆ? ಅದಕ್ಕೆ ಸ್ವಲ್ಪ ನಮ್ಮ ಮಾತು ಕೇಳಿ. ಹೀಗೆ ರೂಲ್ 60 ಕೆಳಗೇನೇ ಇದು ಹೇಗೆ ಬರುತ್ತದೆ ಎನ್ನುವುದಕ್ಕೆ ನಾವು ನಿಮ್ಮ ಮನ ಒಲಿಕೆ ಮಾಡಿಕೊಡುತ್ತೇವೆ. "ನನಗೆ ಮನ ಒಲಿಕೆ ಆಗಲಿಲ್ಲ ನಾನು ಇದನ್ನು ಒಪ್ಪುವುದಿಲ್ಲ. ರೂಲ್ 60 ಕೆಳಗೇ ತೆಗೆದುಕೊಳ್ಳಿ" ಎಂದು ಆಮೇಲೆ ಹೇಳಿ. ನೀವು ಕೇಳುವುದಕ್ಕಿಂತ ಮುಂಚೆ ಹೀಗೆ ಹೇಳುವುದಲ್ಲ. ಇದು ಏನಾಗಿದೆ ಎಂದರೆ

ಹೆಣ್ಣು ನೋಡುವುದಕ್ಕೆ ಹೋಗಿ ಹೆಣ್ಣನ್ನು ನೋಡುವ ಮುಂಚೆಯೇ ಅವಳನ್ನು ತಿರಸ್ಕಾರ ಮಾಡಿದ ಹಾಗೆ.

ಅಧ್ಯಕ್ಷರು : ಅಪೋಸಿಷನ್ ಲೀಡರ್ ಮಾತನಾಡಿದ್ದನ್ನು ಕೇಳಿದ್ದೇವೆ. ಸ್ಪಷ್ಟವಾಗಿ ಅವರು 15 ನಿಮಿಷಗಳ ಕಾಲ ಎಲ್ಲಾ ವಿಚಾರ ಹೇಳಿದ್ದಾರೆ. ಇದು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ. ಮತ್ತೆ ಮತ್ತೆ ಏಕೆ ಒತ್ತಾಯ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥ ಆಗುತ್ತಿಲ್ಲ.

ಶ್ರೀ ಬಿ.ಎಸ್. ಹೊರಟ್ಟಿ (ಸಂಸದೀಯ ಹಾಗೂ ಕಾನೂನು ಸಚಿವರು): ತಾವು ಬಿಎಸಿ ಮೀಟಿಂಗ್‌ನಲ್ಲಿ ಕುಳಿತು ಚರ್ಚೆ ಮಾಡಿದ್ದೀರಿ. ನೀವು ತಿರಸ್ಕಾರ ಮಾಡಿಲ್ಲ. ತಾವು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳಲು ಒಪ್ಪಿದ್ದೀರಿ. ನಾವೆಲ್ಲಾ ಮಾತನಾಡಿದ್ದೇವೆ. ಮಾನ್ಯ ವಿರೋದ ಪಕ್ಷದ ನಾಯಕರು ಮಾತನಾಡಿದ ನಂತರ ನಿಯಮ 69ರ ಕೆಳಗೆ ತೆಗೆದುಕೊಳ್ಳಲು ಒಪ್ಪಿಕೊಂಡಿದ್ದೀರಿ ಎಂದು ತಿಳಿದುಕೊಂಡು ಮಾತನಾಡಿ ಬಂದಿದ್ದೇವೆ. ಬಿಎಸಿನಲ್ಲಿ ಒಂದು ರೀತಿ ಒಪ್ಪಿಕೊಂಡು ಇಲ್ಲಿ ಬೇರೆ ರೀತಿ ಮಾತನಾಡಿದರೆ ಇದೇನು ಸರಿ? ಬಿಎಸಿನಲ್ಲಿ ಏನು ಒಪ್ಪಿಕೊಂಡಿದ್ದಾರೆ, ಅದರಂತೆ ಮಾಡಿ. ನೀವು ತಿರಸ್ಕಾರ ಮಾಡಲಿಲ್ಲ. ಈಗ ತಾವು ನಿಯಮ 69ರ ಕೆಳಗೆ ಚರ್ಚೆ ಮಾಡಲು ಒಪ್ಪಿಕೊಂಡಿದ್ದೀರಿ. ಚರ್ಚೆ ಮಾಡಲಿಕ್ಕೆ ಬೇಕಾದಷ್ಟು ಸ್ಕೋಪ್ ಇದೆ. ಚರ್ಚೆ ಮಾಡಲಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಅವರು ಒಪ್ಪಿಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಮೇಲೆ ಮಾನ್ಯ ಸ್ಪೀಕರ್ ಅವರು ಕನೆ-ವಿನ್ಸ್ ಆಗಬಹುದು. ನೀವು ಸಹ ಕನ್-ವಿನ್ಸ್ ಆಗಬಹುದು.

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲಾ ವಿರೋಧಿ ಪಕ್ಷದ ಸದಸ್ಯರೂ ಕೂಡ ಬಿಎಸಿನಲ್ಲಿ ಇರುತ್ತಾರೆ. ಬರೇ ಸ್ಪೀಕರ್ ಇರುವುದಿಲ್ಲ. ಸ್ಪೀಕರ್ ಒಬ್ಬರೇ ಮೇಲೆ ಏಕೆ ಆಕ್ಷೇಪಣೇ ತರುತ್ತಿದ್ದೀರಿ? ಎಲ್ಲರೂ ಕೂಡಿ ಒಪ್ಪಿಕೊಂಡು ತೀರ್ಮಾನ ತೆಗೆದು ಕೊಂಡಿದ್ದು ಆಗಿದೆ. ಆ ತೀರ್ಮಾನದಂತೆ ನೀವು ನಡೆಯಬೇಕು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಬಿಎಸಿ ಮೀಟಿಂಗ್‌ನಲ್ಲಿ ಚರ್ಚೆ ಆಗಿರುವಂತಹ ವಿಚಾರಗಳನ್ನು ಬಹಿರಂಗ ಮಾಡತಕ್ಕದ್ದು ಸರಿಯಲ್ಲ. ಬಿಎಸಿ ಮೀಟಿಂಗ್‌ನಲ್ಲಿ ಅಜೆಂಡಾ ಆಗಿತ್ತು, ಚರ್ಚೆ ನಡೆದಿದೆ ಇಲ್ಲ ಏನಾದರೂ ಮಾತನಾಡುವುದಿದ್ದರೆ ಬೇರೆ ಏನಾದರೂ ದಯವಿಟ್ಟು ಮಾತನಾಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಬಿಎಸಿ ಮೀಟಿಂಗ್‌ನಲ್ಲಿ ಆದಂತಹ ತೀರ್ಪಿಗೆ ನಾನು ಅಕ್ಷರಶಃ ತಲೆ ಬಾಗಲಿಕ್ಕೆ ಸಿದ್ದವಾಗಿದ್ದೇನೆ. ಬಿಎಸಿ ಒಳಗೆ ಚರ್ಚೆ ಮಾಡುವ ವೇಳೆಗೆ ವಿರೋಧ ಪಕ್ಷದ ನಾಯಕರೊಬ್ಬರೇ ಪ್ರಾಸ್ತಾವಿಕ ಮನವಿ ಸಲ್ಲಿಸುವುದು, ಬೇರೆ ಯಾರೂ ಮಾತನಾಡುವುದಿಲ್ಲವೆಂದು ಇತ್ಯರ್ಥ ಆಯಿತಾ? ಹೇಳಿ. ನೀವೇ ಹೇಳಿ. ನಾನೇನು ಹೇಳುತ್ತೇನೆ? ಬಿಎಸಿ ಒಳಗೆ ಆದಂತಹ ತೀರ್ಮಾನಕ್ಕೆ ನಾನು ತಲೆ ಬಾಗುತ್ತೇನೆ. ಬಿಎಸಿ ಒಳಗೆ ವಿರೋಧ ಪಕ್ಷದ ನಾಯಕರು ಮಾತ್ರ ಪ್ರಾಸ್ತಾವಿಕ ಮನವಿ ಸಲ್ಲಿಸುವುದು ಎಂದು ಹೇಳಿ ತೀರ್ಮಾನ ಆಯಿತಾ?

ಶ್ರೀ ಬಿ.ಎಸ್. ಹೊರಟ್ಟಿ : ಏನು ತೀರ್ಮಾನ ಆಗಿದೆ ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಏನಾಯಿತು ಹೇಳಿ ಎಂದರೆ ಅವರು ಮನವಿ ಸಲ್ಲಿಸುವುದು ಎಂದು ಆಯಿತು. ಅವರೊಬ್ಬರೇ ಎಂದು ಆಗಿಲ್ಲ. ಆದ್ದರಿಂದ ನಾನು ಕೇಳುತ್ತಿರ ತಕ್ಕದ್ದು. ಈಗ ತಾವು ತೀರ್ಮ ಕೊಟ್ಟು ಬಿಟ್ಟಿರಿ. ನಾನು ನಿಮ್ಮ ಮೇಲೆ ಆಪಾದನೆ ಮಾಡಲು ಬರುವುದಿಲ್ಲ. ನೀವು ಪೂರ್ವಗ್ರಹ ಪೀಡಿತರಾಗಿದ್ದೀರೆಂದು ಹೇಳುವುದಕ್ಕೆ ಬರುವುದಿಲ್ಲ. ಹೇಳುವು ದಕ್ಕೆ ಆಗುತ್ತದೆಯೇ? ಆಗುವುದಿಲ್ಲ ಆದರೆ ಎಲ್ಲಾ ಅಲ್ಲಿಗೆ ಬರುತ್ತದೆ. ಅಧ್ಯಕ್ಷ ಪೀಠದ ಮೇಲೆ ಆಪಾದನೆ ಮಾಡಿ ಬಿಟ್ಟರೆ ಅದು ಅಗೌರವ ಆಗುತ್ತದೆ. ತೀರ್ಮಾನವನ್ನು ನಾನು ನಮಗೆ ಬಿಟ್ಟಿದ್ದೇನೆ. ಏನುಬೇಕಾಗಿದ್ದರೂ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಒಂದಿಬ್ಬರು ಮಾತನಾಡಲು ಅವಕಾಶ ಕೊಡಿ ಆಮೇಲೆ ಬಿಎಸಿ ತೀರ್ಮಾನದ ಪ್ರಕಾರ ಆಗಲಿ. ಏಕೆಂದರೆ ಈ ಮನೆಯ ಸಂಪ್ರದಾಯ ಮುರಿದರೆ ನಾಳೆ, ಮುಂದೆ ಬರುವವರು ಅದನ್ನೇ ಹಿಡಿದುಕೊಳ್ಳುತ್ತಾರೆ.

ಅಧ್ಯಕ್ಷರು : ಶ್ರೀನಿವಾಸಗೌಡರೆ ಯಾವ ಸಂಪ್ರದಾಯವೂ ಇಲ್ಲ ಏನೂ ಇಲ್ಲ Straight away I would have rejected it.

(ಗೊಂದಲ)

ಶ್ರೀ ಅಂಜನಮೂರ್ತಿ : ಇದೇನು ಹುಡುಗಾಟಿಕೆ ಕೆಲಸವೇ? ಮಾನ್ಯ ಮುಖ್ಯಮಂತ್ರಿಗಳು ಯಾವುದೇ ತತ್ವ ಇಲ್ಲವೆಂದು ಹೇಳುತ್ತಾರೆ. ನೀವು ಯಾವುದೇ ಸಂಪ್ರದಾಯ ಇಲ್ಲವೆಂದು ಹೇಳುತ್ತಿದ್ದೀರಿ!

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಸದಸ್ಯರಾದ ಶ್ರೀ ಅಂಜನಮೂರ್ತಿಯವರು ಸುಮಾರು ಮೂರು ವರ್ಷಗಳ ಕಾಲ ಅಲ್ಲಿ ಉಪಾಧ್ಯಕ್ಷರಾಗಿ ಕುಳಿತಿದ್ದರು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಈ ಮನೆಯ ಸಂಪ್ರದಾಯ ಮುರಿಯು ವುದು ಬೇಡವೆನ್ನುವುದು ಹೊರತುಪಡಿಸಿದರೆ ಬಿ.ಎ.ಸಿ.ಯಲ್ಲಿ ನೀವುಗಳು ಏನೇನು ತೀರ್ಮಾನ ಕೈಗೊಂಡಿದ್ದೀರಿ. ಅದನ್ನು ನಾವೆಲ್ಲರೂ ಒಪ್ಪಿದ್ದೇವೆ ಆದರೆ ಇವೊತ್ತು ಈ ಮನೆಯ ಸಂಪ್ರದಾಯ ಮುರಿದರೆ ಮುಂದಿನ ದಿನಗಳಲ್ಲಿ ಇದನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುತ್ತಾರೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾ, ಹಿಂದೆ ಇದೆಲ್ಲಾ ಆಗುತ್ತಿತ್ತು ಆನಂತರ ರೂಲಿಂಗ್ ಕೊಡುತ್ತಿದ್ದರೆಂದು ಹೇಳಿದರು. ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿದೆಯೆಂದು ನೀವು ಒಂದೇ ಸಲಕ್ಕೆ ರೂಲಿಂಗ್ ಕೊಟ್ಟರೆ, ಇದು ತಪ್ಪು ಎನ್ನುವುದಕ್ಕಿಂತಲೂ ಆ ರೀತಿ ಆಗಬಾರದು ಸಂಪ್ರದಾಯ ಮುರಿಯಬಾರದು. ಇದು ನಮ್ಮೆಲ್ಲರ ಕಳಕಳಿಯ ಪ್ರಾರ್ಥನೆಯಾಗಿದೆ. ಒಂದಿಬ್ಬರು ಸದಸ್ಯರು ಮಾತನಾಡಲಿ. ಅನಂತರ ಬಿಲ್ ಮತ್ತು ನಿಯಮ 69ರಡಿ ಮಾತನಾಡೋಣ. ಸಂಪ್ರದಾಯವನ್ನೇಕೆ ಮುರಿಯುತ್ತೀರಿ? ಅದು ಹಾಗೇ ನಡೆದುಕೊಂಡು ಹೋಗಲಿ. ದಯವಿಟ್ಟು ಅನುವು ಮಾಡಿಕೊಡಿ.

ಶ್ರೀ ಅಂಜನಮೂರ್ತಿ : ಅಧ್ಯಕ್ಷರೆ, ತಾವು ಮಾತನಾಡುತ್ತಾ, ಯಾವುದೇ ಸಂಪ್ರದಾಯ ಇಲ್ಲವೆಂದು ಹೇಳಿದ್ದೀರಿ. ನಿಮ್ಮಿಂದ ಆ ಮಾತು ಬರಬಾರದು.

ಶ್ರೀ ಡಿ.ಕೆ. ಶಿವಕುಮಾರ್ : ತಾವು ಏನು ತೀರ್ಮ ಕೊಟ್ಟಿದ್ದೀರಿ, ಅದನ್ನು ಒಂದು ಕಡೆ ಪಕ್ಕಕ್ಕಿಟ್ಟು ಮತ್ತೆ 5–6 ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಅನಂತರ 4–5 ಸದಸ್ಯರನ್ನು ಕೇಳಿದರೆ, ನಾಯಕರು ಹೇಳಿದಂತೆ ತಮ್ಮ ಮನಸ್ಸು ಪರಿವರ್ತನೆಯಾಗುತ್ತದೆ. ಆಗ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೀವು ಒಪ್ಪಿಕೊಳ್ಳಬಹುದು.

ಶ್ರೀ ಎನ್. ಚಲುವರಾಯಸ್ವಾಮಿ : ಈಗ ವಿರೋಧ ಪಕ್ಷದ ನಾಯಕರು ಮಾತನಾ ಡುತ್ತಾ ಸದನದ ಸಂಪ್ರದಾಯ ಮುರಿಯಬಾರದೆಂದು ಒಂದು ಕಡೆ ಹೇಳುತ್ತಾರೆ. ತಾವು ರೂಲಿಂಗ್ ಕೊಟ್ಟ ನಂತರ ಮತ್ತೆ ಅದನ್ನು ಸೈಡ್‌ಗೆ ಇಡಿ ಎಂದರೆ ಏನದು?

ಶ್ರೀ ಡಿ.ಕೆ. ಶಿವಕುಮಾರ್ : ರೂಲಿಂಗ್ ಕೊಟ್ಟಿದ್ದು ಸರಿಯಲ್ಲ

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರು ನೀಡಿದ ರೂಲಿಂಗ್ ಪ್ರಶ್ನಿಸುವುದು ಸೂಕ್ತವಲ್ಲ ಬಿ.ಎ.ಸಿ. ಯಲ್ಲೂ ರಿಕ್ವೆಸ್ಟ್ ಮಾಡಿದ್ದೆ.

ಶ್ರೀ ಎಸ್. ಎಸ್. ಪಾಟೀಲ್ : ನಿಲುವಳಿ ಸೂಚನೆಯನ್ನು ಯಾವ ನಿಯಮದಡಿ ತೆಗೆದುಕೊಳ್ಳುವುದು? ಯಾವುದೇ ಸೂಚನೆ ಬಂದರೂ ಅದನ್ನು ನಿಯಮ 69ರಡಿ ಕೊಟ್ಟು ಬಿಡುತ್ತೀರಿ ಈ ಸರ್ಕಾರವೂ ಅಷ್ಟೇ ಮತ್ತೊಂದು ಸರ್ಕಾರವೂ ಅಷ್ಟೇ ಸರ್ಕಾರದಲ್ಲಿ ಯಾರೇ ಇದ್ದರೂ ಅದನ್ನೇ ಮಾಡುವುದು. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದಾಗ ಅದನ್ನೇ ಮಾಡಿದ್ದು ಹಾಗಾದರೆ ನಿಲುವಳಿ ಸೂಚನೆಯೆಂದು ತಾವು ಯಾವುದನ್ನು ತೆಗೆದು ಕೊಳ್ಳುತ್ತೀರಿ? ಯಾವ ವಿಷಯ ಬರುತ್ತದೆ? ಇದು ಬಹಳ ಮಹತ್ವವಾದ ವಿಚಾರವಾದುದರಿಂದ ತೆಗೆದುಕೊಳ್ಳಬೇಕೆಂದು ನಿಯಮಾವಳಿಯಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಗೆಳೆಯರಾದ ಮಾಧುಸ್ವಾಮಿ ಹಾಗೂ ವಾಟಾಳ್ ನಾಗರಾಜ್ ಅವರುಗಳನ್ನು ಕುರಿತು ನಮಗೇಕೆ ಸಹಾಯ ಮಾಡುವುದಿಲ್ಲವೆಂದು ಕೇಳಿದೆ. ಅವರು ನನಗೆ ಹೇಳಿದರು ನೀವು ಒಳಗಡೆ ಒಪ್ಪಿಕೊಂಡು ಬಂದಿರಿ. ನಾವೂ–ಅವರೂ ಚರ್ಚೆ ಮಾಡಿದ್ದು ಇಲ್ಲ, ಒಳಗಡೆ ಚರ್ಚೆಯಾಗಲಿಲ್ಲ. ನಾಯಕರೊಬ್ಬರೇ ಚರ್ಚೆ ಮಾಡುವು ದಿಲ್ಲವೆಂದು ತೀರ್ಮಾನವಾಗಿತ್ತೆಂದರು. ನನಗೆ ತಿಳಿದಂತೆ ಅವರೊಬ್ಬರೇ ಪ್ರಸ್ತಾಪ ಮಾಡಬಹು ದೆಂದು ತೀರ್ಮಾನವಾಗಿರಲಿಲ್ಲ. Since my other friends also say, ನಮಗೆ ಇದರಲ್ಲಿ ಪಟ್ಟು, ಪ್ರತಿಷ್ಠೆ ಅಂತಹುದ್ದೇನೂ ಇಲ್ಲ ನಾವು ಬೇರೆ ಬೇರೆ ತರಹದ ಅಭಿಪ್ರಾಯಗಳನ್ನಿಟ್ಟುಕೊಂಡು ಸದನಕ್ಕೆ ಬರುವವರು ಇಲ್ಲಿ ಕಲಾಪ ಆಗುವುದು ಮುಖ್ಯ ತಾವು ತೀರ್ಪು ಕೊಟ್ಟಿದ್ದೀರಿ. ಇನ್ನು ನಾವು ಅದರ ಮೇಲೆ insist ಮಾಡುವುದಿಲ್ಲ. ಕಾರ್ಯಕ್ರಮ ನಡೆದುಕೊಂಡು ಹೋಗಲಿ.

Mr. Speaker : Thank you

2. ಅಧ್ಯಕ್ಷರ ಅಪ್ಪಣೆಯ ಮೇರೆಗೆ :

(ಅ) ವಿಷಯ : ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ನಾವು ಕಪ್ಪು ಬಟ್ಟೆ ಹಾಕಿಕೊಂಡು ಬಂದಿದ್ದೇವೆ. ಅದರ ಬಗ್ಗೆ ನೀವು ಕೇಳುತ್ತೀರೆಂದು ತಿಳಿದಿದ್ದೆವು. ನೀವು ಕೇಳಲಿಲ್ಲ ಇದು ಅತ್ಯಂತ ನೋವಿನ ಸಂಗತಿ.

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರು ಯಾವಾಗಲೂ ಕಪ್ಪು ಬುಷ್ ಷರ್ಟ್ ಧರಿಸುತ್ತಾರೆ. ಅವರ ಪ್ರಭಾವದಿಂದ ನೀವೂ ಹಾಕಿರಬಹುದೆಂದುಕೊಂಡೆ.